

ಹನಸಿ ಚಂದ್ರಪ್ಪ



ಕೆರೆ ಭದ್ರ ಮಾಡುವಲ್ಲಿ ನಿರತರಾಗಿರುವವರು

ನೀರಗಂಟಿ ಕೆಲಸ ಮಾಡಲಿಕ್ಕೆ ಎರಡು ಗುಂಡಿಗೆ ಬೇಕು! ಎರಡುಮೂರು ಆಳಿನಷ್ಟು ಆಳದ ನೀರಿನಲ್ಲಿ, ತೂಬಿನಲ್ಲಿ ಮುಳುಗಿ ರಂಧ್ರ ಹುಡುಕುವ, ಸ್ವಚ್ಛ ಮಾಡುವ ಕೆಲಸ ಸುಮ್ಮನೆ ಅಲ್ಲ. ಸ್ವಲ್ಪ ಹೆಚ್ಚುಕಡಿಮೆ ಆದರೂ ಜೀವಕ್ಕೆ ಸಂಚಕಾರ. ನೀರಗಂಟಿ ಉಸಿರು ಬಿಗಿಹಿಡಿದು ಕೆರೆಯಲ್ಲಿ ಮುಳುಗಿ ತನ್ನ ಕೆಲಸ ಮಾಡುತ್ತಿದ್ದರೆ, ಕೆರೆ ದಂಡೆಯಲ್ಲಿ ಇರುವವರೂ ಉಸಿರು ಬಿಗಿಹಿಡಿದು ಆತಂಕದಿಂದ ನಿಂತಿರುತ್ತಾರೆ. 'ಈ ಕೆಲಸದಲ್ಲಿ ಎಷ್ಟು ಪಳಗಿದರೂ, ಹುಷಾರಾಗಿದ್ದರೂ ಸಾಲದು. ಅನುಭವ–ಧೈರ್ಯ ಬೇಕು. ನಮ್ಮ ಗ್ರಹಚಾರ ಸರಿ ಇಲ್ಲದಿದ್ದರೆ ಪ್ರಾಣ ಹೋಗುತ್ತೆ. ಭಯ ಬಿದ್ದರೆ ಕುಸ್ತಿ ಹೋದಂಗೆ...' ಅನ್ನುತ್ತಾರೆ ನೀರಗಂಟಿ ಕೆಲಸದಲ್ಲಿ ಪಳಗಿರುವ ಚಂದ್ರಪ್ಪ.

## ರಂಧ್ರ ಗುರ್ತಿಸುವುದು ಹೇಗೆ?

ಕೆರೆಯಲ್ಲಿನ ಸಣ್ಣ ಸಣ್ಣ ರಂಧ್ರಗಳನ್ನೂ ನಿರ್ಲಕ್ಷಿಸುವಂತಿಲ್ಲ. ಏರಿಯ ಒಳಮೈಯಲ್ಲಿ ಎಲ್ಲೋ ಒಂದೆಡೆ ತೂತು ಬಿದ್ದಾಗ, ಹೊರಮೈಯಲ್ಲಿ ನೀರು ಬಸಿಯುತ್ತಿರುತ್ತದೆ. ಅದನ್ನು ಪತ್ತೆ ಹಚ್ಚಲು ನೀರಗಂಟಿಗಳು ಬಸಿಯುವ ನೀರಿಗೆ ನೇರವಾಗಿ ನೀರಿನಲ್ಲಿ ಮುಳುಗಿ ಹುಡುಕಾಟ ನಡೆಸುತ್ತಾರೆ. ಎಲ್ಲಿ ನೀರಿನ ಸೆಳೆವಿನ ಅನುಭವ ಆಗುತ್ತದೆಯೋ ಅಲ್ಲಿ ರಂಧ್ರ ಇರುವ ಅಂದಾಜು ಮಾಡುತ್ತಾರೆ. ನಂತರ ನೀರಿನಿಂದ ಮೇಲೆದ್ದು, ನೀಲಿಯ ಪೊಟ್ಟಣ ತೆಗೆದುಕೊಂಡು ನೀರಿನಲ್ಲಿ ಮುಳುಗಿ, ಅಂದಾಜು ಮಾಡಿದ ಜಾಗದಲ್ಲಿ ನೀಲಿ ಸುರಿಯುತ್ತಾರೆ. ನೀರನ್ನು ಕಲಕುತ್ತಾರೆ. ಆಗ ನೀಲಿ ಆದ, ಕಲಕು ನೀರು ಏರಿಯ ಮತ್ತೊಂದು ಕಡೆ ಬಂದರೆ, ಅಲ್ಲಿ ರಂಧ್ರ ಇರುವುದು ಖಚಿತವಾಗುತ್ತದೆ. ಆ ಜಾಗಕ್ಕೆ ಉಸುಕಿನ ಚೀಲ, ಮಣ್ಣು ಹಾಕಿ ಮುಚ್ಚುತ್ತಾರೆ. ಅಷ್ಟಕ್ಕೂ ನೀರಿನ ಹರಿವು ನಿಲ್ಲದಿದ್ದರೆ ಯಂತ್ರಗಳನ್ನು ಬಳಸಿ ಸರಿ ಮಾಡಿಸುತ್ತಾರೆ.